**ಓ.ಎಸ್.ನಂಃ 32/2024**

**ಡಿಡಬ್ಲ್ಯೂ-1**

**ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 26.02.2026 ರಂದು ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲು: ವಾದಿ ಪರ ವಕೀಲರಿಂದಃ**

ದಾವಾ ಸ್ವತ್ತು ಮೂಲತಃ ವಾದಿಯ ಗಂಡ ಪುಟ್ಟಚಿಕ್ಕೇಗೌಡರಿಗೆ ಸೇರಿದ್ದು ಎಂದರೆ ಸರಿ. ಆಕೆಯ ಗಂಡನ ಮರಣದ ನಂತರ ವಾದಿ ಹೆಸರಿಗೆ ಖಾತಾ ವರ್ಗಾವಣೆಯಾಗಿದೆ ಎಂದರೆ ಸರಿ. ಅಂದಿನಿಂದ ವಾದಿ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ದಿಃ 31.12.2021 ರಂದು ನಾನು ಗಲಾಟೆ ಮಾಡಿದ್ದೇನೆ ಎಂದು ವಾದಿ ನನ್ನ ವಿರುದ್ಧ ದೂರು ನೀಡಿದ್ದಾರೆ ಎಂದರೆ ಸರಿ. ಆದರೆ ನಾನು ಗಲಾಟೆ ಮಾಡಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಂತರ ನನ್ನ ತಂದೆಗೆ ಪೊಲೀಸರು ಬುದ್ಧಿವಾದ ಹೇಳಿ ಕಳುಹಿಸಿರುತ್ತಾರೆ ಎಂದರೆ ಸರಿ. ದಿಃ 31.08.2023 ರಂದು ವಾದಿಯ ಮಗ ನಮ್ಮ ವಿರುದ್ಧ ದೂರು ದಾಖಲಿಸಿರುತ್ತಾರೆ ಎಂದರೆ ಸಾಕ್ಷಿ 6 ತಿಂಗಳ ನಂತರ ನಮಗೆ ತಿಳಿಯಿತು ಎಂದು ನುಡಿಯುತ್ತಾರೆ. ಸಿ.ಸಿ. ಸಂಖ್ಯೆ 744/2023 ನಮ್ಮ ಮೇಲೆ ದಾಖಲಾಗಿ ನಾವು ಹಾಜರಾಗಿದ್ದೇವೆ ಎಂದರೆ ಸರಿ.

ದಾವಾ ಸ್ವತ್ತನ್ನು ನಾವು ಅಕ್ರಮವಾಗಿ ತಂತಿ ಬೇಲಿ ಹಾಕಿಸಿಕೊಂಡಿದ್ದೇವೆ ಎಂದರೆ ಸಾಕ್ಷಿ ನಮ್ಮ ಹದ್ದುಬಸ್ತಿಗೆ ಮಾತ್ರ ಹಾಕಿಸಿಕೊಂಡಿದ್ದೇವೆ ಎಂದು ನುಡಿಯುತ್ತಾರೆ. ನಮ್ಮ ಸ್ವತ್ತನ್ನು ನಾವು ಅಳತೆ ಮಾಡಿಸಿಲ್ಲ. ನಮ್ಮ ಸ್ವತ್ತಿಗೆ ನಾವು ಆರ್.ಟಿ.ಸಿ ಯನ್ನು ಹಾಜರುಪಡಿಸಿದ್ದೇವೆ. ವಾದಿಯ ಮಗ ತಮ್ಮ ವಿರುದ್ಧ ದಾಖಲು ಮಾಡಿರುವ ದೂರನ್ನು ಸಾಕ್ಷಿಗೆ ತೋರಿಸಿದ್ದು, ಅದನ್ನು ಒಪ್ಪಿಕೊಂಡಿರುತ್ತಾರೆ, ಆದರೆ ಅದು ಜೆರಾಕ್ಸ್ ಪ್ರತಿಯಾದ ಕಾರಣ ಅದನ್ನು ನಿಶಾನಿಕರಿಸಿರುವುದಿಲ್ಲ. ಐಟಂ ನಂ.3 ರ ಪೂರ್ವ ದಿಕ್ಕಿಗೆ ಮಾತ್ರ ವಾದಿಗೆ ತಿರುಗಾಡಲು ರಸ್ತೆ ಇದೆ ಎಂದರೆ ಸಾಕ್ಷಿ ಪಶ್ಚಿಮ ದಿಕ್ಕಿಗೆ ಮಾತ್ರ ರಸ್ತೆ ಇದೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಪೂರ್ವ ಮತ್ತು ಪಶ್ಚಿಮ ಎರಡು ದಿಕ್ಕಿಗೂ ರಸ್ತೆ ಇದೆ ಎಂದು ನುಡಿಯುತ್ತಾರೆ.

ಸಾಕ್ಷಿಗೆ ಎರಡು ಫೋಟೋಗಳನ್ನು ತೋರಿಸಲಾಗಿ ಅದರಲ್ಲಿ ಅಡ್ಡಲಾಗಿ ಇಟ್ಟಿರುವ ವಸ್ತುಗಳನ್ನು ನಾವೇ ಇಟ್ಟಿರುವುದು ಎಂದು ಒಪ್ಪಿಕೊಂಡ ಕಾರಣ, ಅವುಗಳನ್ನು ನಿಪಿ7 ಮತ್ತು ನಿಪಿ8 ಎಂದು ಗುರುತಿಸಲಾಯಿತು (ಪ್ರತಿವಾದಿ ಪರ ವಕೀಲರು ಸದರಿ ಫೋಟೋಗೆ ಸಿಡಿ ಇಲ್ಲ ಎಂದು ತಕರಾರು ವ್ಯಕ್ತಪಡಿಸಿರುತ್ತಾರೆ. ಸದರಿ ತಕರಾರಿಗೆ ಒಳಪಟ್ಟು ಫೋಟೋವನ್ನು ನಿಶಾನಿಕರಿಸಲಾಯಿತು). ಸಾಕ್ಷಿಗೆ ಒಂದು ತಂತಿ ಬೇಲಿ ಹಾಕಿರುವ ಫೋಟೋವನ್ನು ತೋರಿಸಲಾಗಿ ಅದರಲ್ಲಿ ಕಾಣುವ ತಂತಿ ಬೇಲಿಯನ್ನು ತಾನೇ ಹಾಕಿರುವುದಾಗಿ ಒಪ್ಪಿಕೊಂಡ ಕಾರಣ, ಅದನ್ನು ನಿಪಿ9ಎಂದು ಗುರುತಿಸಲಾಯಿತು (ಪ್ರತಿವಾದಿ ಪರ ವಕೀಲರು ಸದರಿ ಫೋಟೋಗೆ ಸಿಡಿ ಇಲ್ಲ ಎಂದು ತಕರಾರು ವ್ಯಕ್ತಪಡಿಸಿರುತ್ತಾರೆ. ಸದರಿ ತಕರಾರಿಗೆ ಒಳಪಟ್ಟು ಫೋಟೋವನ್ನು ನಿಶಾನಿಕರಿಸಲಾಯಿತು).

ಸರ್ವೇ ನಂಃ 94/1 ರ ವಿಸ್ತೀರ್ಣಕ್ಕೆ ಮಾತ್ರ ನಾನು ಸ್ವಾಧೀನದಲ್ಲಿದ್ದೇನೆ ಎಂದರೆ ಸರಿ. ಅಕ್ರಮವಾಗಿ ವಾದಿಯ ಸ್ವತ್ತನ್ನು ಕಬಳಿಸಿ, ತಂತಿ ಬೇಲಿ ಹಾಕಿದ್ದೇನೆ ಎಂದರೆ ಸರಿಯಲ್ಲ. ನನ್ನ ಜಮೀನನ್ನು ಅಳತೆ ಮಾಡಿಸದೆ ವಾದಿಯ ಜಮೀನನ್ನು ಅತೀಕ್ರಮಿಸಿ ತಂತಿ ಬೇಲಿ ಹಾಕಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಜಮೀನನ್ನು ದುರುದ್ದೇಶದಿಂದ ಕಬಳಿಸುವ ಸಲುವಾಗಿ ತಂತಿ ಬೇಲಿಯನ್ನು ಹಾಕಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ